ಓ ಎಸ್ ನಂ. 01/2016
ಪಿ ಡಬ್ಲ್ಯು 2
ದಿನಾಂಕ 18-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ವೈ ಟಿ ಎಂ ವಕೀಲರಿಂದಃ

ನನಗೆ ಈಗ 65 ವರ್ಷ ವಯಸ್ಸಾಗಿರುತ್ತದೆ. ನಾನು ಯಾವ ವಿಚಾರವಾಗಿ ಸಾಕ್ಷ್ಯ ನುಡಿಯಲು ಬಂದಿದ್ದೇನೆ ಎಂದರೆ ಸಾಕ್ಷಿ ಜಮೀನು ಭಾಗ ಆಗಿಲ್ಲ ಎಂಬ ವಿಚಾರದ ಬಗ್ಗೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ವಾದಿ ಗೋವಿಂದಪ್ಪರವರ ಮನೆ ಹುಲ್ಲೇಹಳ್ಳಿಯಲ್ಲಿ ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತು. 1 ಮತ್ತು 3 ನೇ ಪ್ರತಿವಾದಿಗಳ ಮನೆ ಸಹ ಎಲ್ಲಿ ಬರುತ್ತದೆಎಂದು ನನಗೆ ಗೊತ್ತಿದೆ. ಸಾಕ್ಷಿ ಮುಂದುವರೆದು ಎಲ್ಲಾ ಮನೆಗಳು ಒಂದೇ ಕಡೆ ಇವೆ ಎಂದು ನುಡಿಯುತ್ತಾರೆ. ಅವರು ಒಂದೇ ಕಡೆ ವಾಸ ಇದ್ದಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಗೋವಿಂದಪ್ಪ, ಹನುಮಂತಮ್ಮ ಮತ್ತು ಜಯಮ್ಮ ಒಂದೇ ಮನೆಯಲ್ಲಿ ವಾಸ ಇದ್ದಾರಾ ಎಂದರೆ ಸಾಕ್ಷಿ ವಾದಿ ಗೋವಿಂದಪ್ಪ ಪ್ರತ್ಯೇಕವಾಗಿ ದರ್ಖಾಸ್ತಿಯ ಮನೆಯಲ್ಲಿ ವಾಸ ಇದ್ದಾರೆ, ಹನುಮಂತಮ್ಮ ಮತ್ತು ಜಯಮ್ಮ ಸಹ ಬೇರೆ ಬೇರೆ ವಾಸ ಇದ್ದಾರೆ ಎಂದು ನುಡಿಯುತ್ತಾರೆ. ವಾದಿ ಯಾವ ಯಾವ ಸರ್ವೆ ನಂಬರುಗಳ ಜಮೀನಿನ ಮೇಲೆ ದಾವೆ ಹೂಡಿರುತ್ತಾರೆಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ವಾದಿ ಜಮೀನಿನ ಸರ್ವೆ ನಂ.14/5 ಆಗಿರುತ್ತದೆ

ಎಂದು ನುಡಿಯುತ್ತಾರೆ. ನನಗೆ ಜಮೀನಿನ ಪಕ್ಕದಲ್ಲಿರುವ ವಾದಿ ಮತ್ತು ಪ್ರತಿವಾದಿಗಳ ಜಮೀನನ್ನು ಯಾರು ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಯಾರು ಉಳುಮೆ ಮಾಡುತ್ತಿಲ್ಲ ಹಾಗೇ ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ವಾದಿ ಗೋವಿಂದಪ್ಪನ ತಂದೆಯ ಹೆಸರು ಹನುಮಂತಪ್ಪ ಮತ್ತು ತಾಯಿ ಹೆಸರು ಹನುಮಂತಮ್ಮ. ವಾದಿಯ ತಂದೆ ಹನುಮಂತಪ್ಪನವರ ತಂದೆಯ ಹೆಸರು ಸಹ ಗೋವಿಂದಪ್ಪ ಆಗಿರುತ್ತದೆ. ಮೂಲ ಪುರುಷ ಗೋವಿಂದಪ್ಪರವರಿಗೆ ಇಬ್ಬರು ಹೆಂಡತಿಯರು. ಮೊದಲನೇ ಹೆಂಡತಿಯ ಹೆಸರು ನನಗೆ ಮರೆತು ಹೋಗಿದೆ, ಎರಡನೇ ಹೆಂಡತಿಯ ಹೆಸರು ಕೊಂತಮ್ಮ ಆಗಿರುತ್ತದೆ. ಮೂಲ ಪುರುಷ ಗೋವಿಂದಪ್ಪರವರ ಮೊದಲನೇ ಹೆಂಡತಿಗೆ ಒಟ್ಟು 4 ಜನ ಮಕ್ಕಳು. ಅವರ ಹೆಸರುಗಳು ನನಗೆ ಈಗ ಹೇಳಲು ಆಗುವುದಿಲ್ಲ. ಅವರೆಲ್ಲಾರೂ ಮೃತ ಪಟ್ಟಿರುತ್ತಾರೆ. ಮೂಲ ಪುರುಷ ಗೋವಿಂದಪ್ಪರವರ ಎರಡನೇ ಹೆಂಡತಿ ಕೊಂತಮ್ಮರವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಮೂರು ಜನ ಹೆಣ್ಣು ಮಕ್ಕಳು. ಅವರೆಂದರೆ ಕರಿಯಮ್ಮ, ಸಣ್ಣಮ್ಮ, ಕೊಂತಮ್ಮ, ಗೋವಿಂದಪ್ಪ ಮತ್ತು ತಿಮ್ಮಪ್ಪ ಆಗಿರುತ್ತದೆ. ಮೂಲ ಪುರುಷ ಗೋವಿಂದಪ್ಪರವರಿಗೆ ತನ್ನ ಹಿರಿಯ ಮತ್ತು ಕಿರಿಯ ಹೆಂಡತಿ ಮುಖಾಂತರ ಒಟ್ಟು 9 ಮಕ್ಕಳು ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿ ಯಾರೆಲ್ಲಾ ಪ್ರತಿವಾದಿಗಳು ಇದ್ದಾರೆ ಎಂಬ ವಿಚಾರ

ನನಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ವಾದಿ ನನ್ನನ್ನು ಸಾಕ್ಷ್ಯ ನುಡಿಯುವಂತೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿ ನಾನು ಊರಿನಲ್ಲಿ ಮುಖಂಡನಾಗಿದ್ದು ಈ ಹಿಂದೆ 2-3 ಬಾರಿ ಪಂಚಾಯಿತಿ ಕರೆದಿದ್ದು ಯಾರು ಬಂದಿರುವುದಿಲ್ಲ, ವಾದಿ ನನಗೆ ಸಾಕ್ಷ್ಯ ನುಡಿಯುವಂತೆ ಕೇಳಿಕೊಂಡಿದ್ದು, ನಾನು ನ್ಯಾಯದ ಪರ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ವಾದಿ ಬೇರೆ ಯಾವ ದಾವೆ ಹೂಡಿದ್ದಾರೆಂದು ಗೊತ್ತ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಬೇರೆ ಬೇರೆ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸಾಕ್ಷಿ ನಾನು ಈ ದಾವೆಯಲ್ಲಿ ಸಾಕ್ಷ್ಯ ನುಡಿಯುತ್ತಿರುವುದನ್ನು ಹೊರತು ಪಡಿಸಿ ಬೇರೆ ಪ್ರಕರಣದಲ್ಲಿ ಬಂದಿಲ್ಲ ಎಂದು ನುಡಿಯುತ್ತಾರೆ. ನನಗೆ ಸಂಬಂಧಿಸಿದ ಹಲವಾರು ಪ್ರಕರಣಗಳು ನ್ಯಾಯಾಲಯದಲ್ಲಿ ನಡೆಯುತ್ತಿವೆ ಎಂದರೆ ಸರಿ. ನಾನು ಮತ್ತು ವಾದಿ ವಿಶ್ವಾಸದಿಂದ ಇರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.